# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2256 |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಸಿ ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 3. | ಉತ್ತರಿಸುವ ದಿನಾಂಕ | : | 26.03.2026 |
| 4. | ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮೈಸೂರು ನಗರವನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿ ಮಾಡಲು ಪೊಲೀಸ್ ಇಲಾಖೆಯು 'ವಿಮುಕ್ತಿ' ಎಂಬ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಮೈಸೂರು ನಗರ ಪೊಲೀಸ್ ವತಿಯಿಂದ " ವಿಮುಕ್ತಿ" ಎಂಬ ಘೋಷ ವಾಕ್ಯದೊಂದಿಗೆ ಮಾದಕ ಮುಕ್ತ ಮೈಸೂರಿನತ್ತ ಒಂದು ಹೆಜ್ಜೆ ಎಂಬ ನೂತನ ಕಾರ್ಯಕ್ರಮವನ್ನು ದಿನಾಂಕ: 12.02.2026 ರಿಂದ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದ ಅಂಗವಾಗಿ ಮೈಸೂರು ನಗರ ಪೊಲೀಸ್ ಇಲಾಖೆಯಿಂದ ವಾಟ್ಸಅಪ್ ಮೊಬೈಲ್ ಸಹಾಯವಾಣಿ ಸಂಖ್ಯೆ: 8277948080 ನ್ನು ಬಿಡುಗಡೆಗೊಳಿಸಲಾಗಿದೆ. ಮಾದಕ ವಸ್ತುಗಳ ಮಾರಾಟ, ಸಾಗಾಟ ಹಾಗೂ ಸೇವನೆಯಂತಹ ಸಂಗತಿಗಳು ಕಂಡು ಬಂದಲ್ಲಿ ವಾಟ್ಸಅಪ್ ಸಹಾಯವಾಣಿ ಸಂಖ್ಯೆ: 8277948080ರ ಮೂಲಕ ಮಾಹಿತಿಯನ್ನು ನೀಡುವಂತೆ ಕೋರಲಾಗಿದೆ. ಈ ಸಹಾಯವಾಣಿ ಸಂಖ್ಯೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಈ ಸಹಾಯವಾಣಿಗೆ ಮಾಹಿತಿ ನೀಡುವ ಮಾಹಿತಿದಾರರ ವಿವರಗಳನ್ನು ಗೌಪ್ಯವಾಗಿಡಲಾಗುತ್ತಿದೆ.</td></tr>
<tr><td>(ಆ)</td><td>ಈ ಅಭಿಯಾನದ ಅಡಿಯಲ್ಲಿ ಕಳೆದ ಕೆಲವು ದಿನಗಳಲ್ಲಿ ಎಷ್ಟು ಲಾಡ್ಜ್ ಗಳು, ಪಿ.ಜಿ (PG) ಗಳು ಮತ್ತು ಪಾರ್ಕ್‌ಗಳ ಮೇಲೆ ದಾಳಿ ನಡೆಸಲಾಗಿದೆ; ಈ ಪೈಕಿ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಎಷ್ಟು ಜನರನ್ನು ಬಂಧಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು);</td><td>ಈ ಅಭಿಯಾನದ ಅಡಿಯಲ್ಲಿ ದಾಳಿ ನಡೆಸಿರುವ, ದಾಖಲಾಗಿರುವ ಪ್ರಕರಣಗಳ ಮತ್ತು ಬಂಧಿಸಿರುವ ಮಾಹಿತಿಯ ವಿವರ ಈ ಕೆಳಕಂಡಂತಿದೆ:-<br><table>
<tr><th>ವರ್ಷ</th><th>ಲಾಡ್ಜ್‌ಗಳು, ಪಿ.ಜಿಗಳು ಮತ್ತು ಪಾರ್ಕ್‌ಗಳ ಮೇಲೆ ದಾಳಿ ನಡೆಸಿದ ಪ್ರಕರಣಗಳ ಸಂಖ್ಯೆ</th><th>ಈ ಪೈಕಿ ದಾಖಲಾದ ಪ್ರಕರಣಗಳ ಸಂಖ್ಯೆ</th><th>ಪ್ರಕರಣದಲ್ಲಿ ಬಂಧಿಸಿರುವ ಸಂಖ್ಯೆ</th></tr>
<tr><td>2023</td><td>-</td><td>-</td><td>-</td></tr>
<tr><td>2024</td><td>-</td><td>-</td><td>-</td></tr>
<tr><td>2025</td><td>-</td><td>-</td><td>-</td></tr>
<tr><td>2026<br>**26.02.26**</td><td>**ಲಾಡ್ಜ್**-1036<br>**ಪಿ.ಜಿ**-422<br>**ಪಾರ್ಕ್**-761</td><td>-</td><td>-</td></tr>
</table></td></tr>
<tr><td>(ಇ)</td><td>ಸಾರ್ವಜನಿಕರು ಮಾದಕ ವಸ್ತುಗಳ ಮಾರಾಟ ಅಥವಾ ಸೇವನೆಯ ಬಗ್ಗೆ ದೂರು ನೀಡಲು ಆರಂಭಿಸಿರುವ WhatsApp ಸಂಖ್ಯೆ (8277948080)ಗೆ ಈವರೆಗೆ ಎಷ್ಟು ದೂರುಗಳು ಬಂದಿವೆ ಮತ್ತು ಆ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು;</td><td><table>
<tr><th>ವರ್ಷ</th><th>WhatsApp ಸಂಖ್ಯೆ: 8277948080 ಮುಖಾಂತರ ಈವರೆಗೆ ದಾಖಲಾದ ದೂರುಗಳ ಸಂಖ್ಯೆ</th><th>ದೂರುಗಳ ಮೇಲೆ ಕೈಗೊಂಡಿರುವ ಕ್ರಮ</th></tr>
<tr><td>2023</td><td>-</td><td>-</td></tr>
<tr><td>2024</td><td>-</td><td>-</td></tr>
<tr><td>2025</td><td>-</td><td>-</td></tr>
<tr><td>2026<br>**26.02.26**</td><td>22</td><td>**22 ಪ್ರಕರಣಗಳನ್ನು ದಾಖಲಿಸಲಾಗಿದೆ.**<br>**ಅದರಲ್ಲಿ** Seizer cases-4<br>Consumption Cases-18</td></tr>
</table></td></tr>
</table>

<table>
<tr>
<td>(ಈ)</td>
<td>ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಮಾದಕ ವ್ಯಸನದ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರವು ಮೈಸೂರಿನಾದ್ಯಂತ ಹಮ್ಮಿ ಕೊಂಡಿರುವ ಕಾರ್ಯ ಕ್ರಮಗಳೇನು ಮತ್ತು ಇದನ್ನು ರಾಜ್ಯದ ಇತರ ನಗರಗಳಿಗೂ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ?</td>
<td>ಮೈಸೂರು ನಗರ ಪೊಲೀಸ್ ಠಾಣಾ ವತಿಯಲ್ಲಿರುವ ಶಾಲಾ-ಕಾಲೇಜು, ಆಡಳಿತ ಮಂಡಳಿ ಮತ್ತು ಸಾರ್ವಜನಿಕರ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಕಾರ್ಯಕ್ರಮ ಕೈಗೊಳ್ಳಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಒಟ್ಟು ಜಾಗೃತಿ ಕಾರ್ಯ ಕ್ರಮಗಳ ಸಂಖ್ಯೆ</th><th>ವಿದ್ಯಾರ್ಥಿಗಳು ಭಾಗವಹಿಸಿದ ಸಂಖ್ಯೆ</th></tr>
<tr><td>2023</td><td>373</td><td>13537</td></tr>
<tr><td>2024</td><td>452</td><td>27525</td></tr>
<tr><td>2025</td><td>533</td><td>25572</td></tr>
<tr><td>2026<br>28.02.26</td><td>123</td><td>14500</td></tr>
</table>
ಶಾಲಾ-ಕಾಲೇಜು ಕಟ್ಟಡದ ಸುತ್ತಮುತ್ತಲಿನ ಪ್ರದೇಶ ಹಾಗೂ ಪಾರ್ಕ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಹಾಯವಾಣಿ ಸಂಖ್ಯೆ ಹೊಂದಿರುವ ಭಿತ್ತಿಪತ್ರಗಳನ್ನು ಅಂಟಿಸಲಾಗಿರುತ್ತದೆ.<br>
ಮೈಸೂರು ನಗರ ಪೊಲೀಸ್ ಘಟಕದಿಂದ ಪ್ರಾರಂಭಿಸಲಾಗಿರುವ "ವಿಮುಕ್ತಿ" ಎಂಬ ವಿಶೇಷ ಅಭಿಯಾನದಿಂದ ಸಾರ್ವಜನಿಕರಿಗೆ ಉಪಯೋಗವಾಗುತ್ತಿದೆ. ಇದನ್ನು ರಾಜ್ಯದ ಇತರೆ ನಗರಗಳಿಗೆ ವಿಸ್ತರಿಸುವ ಯೋಜನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
</table>

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

ಒಇ 28 ಪಿಎನ್‌ಡಿ 2026